# ಅಂತರ್ ಧರ್ಮೀಯ ಸಂವಾದದ ಪೊಂತಿಫಿಕಲ್ ಸಭೆ

## ಕ್ರೈಸ್ತರಿಗೆ ಮತ್ತು ಹಿಂದು ಬಂಧುಗಳಿಗೆ:
## ಯುವ ಪೀಳಿಗೆಯನ್ನು ಶಾಂತಿಯ ದೂತರನ್ನಾಗಿ ರೂಪಿಸೋಣ

MESSAGE FOR THE FEAST OF DEEPVALI

2012

**Vatican City**

ಆತ್ಮೀಯ ಹಿಂದು ಬಂಧುಗಳೇ,

1. ಅಂತರ್ ಧರ್ಮೀಯ ಸಂವಾದದ ಪೊಂತಿಫಿಕಲ್ ಸಭೆಯಿಂದ ಈ ವರ್ಷದ ದೀಪಾವಳಿ ಹಬ್ಬಕ್ಕೆ ತಮಗೆ ಶುಭಕಾಮನೆಗಳನ್ನು ಹಾಗೂ ಶುಭಾಷಯಗಳನ್ನು ಕಳುಹಿಸುತ್ತೇವೆ. ನಿಮ್ಮ ಕುಟುಂಬಗಳಲ್ಲಿ ಮತ್ತು ಸಮೂಹಗಳಲ್ಲಿ ಬ್ರಾತ್ರತ್ವ ಮತ್ತು ಸಹೋದರತ್ವತೆಯು ಬೆಳಗಲಿ ಎಂದು ಹಾರೈಸುತ್ತೇವೆ.

2. ಮಾನವ ಇತಿಹಾಸದ ಈ ಕ್ಲಿಷ್ಟಕರ ಸಮಯದಲ್ಲಿ, ಅನೇಕ ನಕಾರಾತ್ಮಕ ಶಕ್ತಿಗಳು ಮಾನವನ ನ್ಯಾಯಯುತವಾದ ಬಯಕೆಗಳಿಗೆ ಭಯಹುಟ್ಟಿಸಿ ವಿಶ್ವದ ಅನೇಕ ಪ್ರದೇಶಗಳಲ್ಲಿ ಶಾಂತಿಯುತವಾದ ಜೀವನ ಜೀವಿಸದಂತೆ ಮಾಡಿದೆ. ಈ ಸಂದರ್ಭದಲ್ಲಿ ನಾವು ನಿಮ್ಮೊಡನೆ ರೂಡಿಯಂತೆ ಈ ವಿಷಯದ ಕುರಿತು ಧ್ಯಾನಿಸಲು, ಯುವ ಪೀಳಿಗೆಯನ್ನು ಶಾಂತಿಯ ದೂತರನ್ನಾಗಿ ರೂಪಿಸುವತ್ತ ಹಿಂದು ಬಾಂಧವರ, ಕ್ರೈಸ್ತ ಬಾಂಧವರ ಮತ್ತು ಇನ್ನಿತರರ ಜವಾಬ್ದಾರಿಯ ಕುರಿತು ಜತೆಗೂಡಿ ಧ್ಯಾನಿಸಲು ಬಯಸುತ್ತೇವೆ.

3. ಶಾಂತಿ ಕೇವಲ ಯುದ್ಧದ ಅನುಪಸ್ಥಿತಿಯಲ್ಲ, ಅದೊಂದು ನಿಶ್ಚಲ ಜೀವನಕ್ಕೆ ಭರವಸೆ ಕೊಡುವ ಒಪ್ಪಂದವೂ ಅಲ್ಲ, ಬದಲಾಗಿ ಅದೊಂದು ಸಂಪೂರ್ಣ ಮತ್ತು ದಕ್ಕೆಯಾಗದ, ಸೌಹಾರ್ದತೆಯ ಸಂರಕ್ಷಣೆ (cf ಬೆನೆದಿಕ್ಟ್ XVI ಎಕ್ಲೆಸಿಯಾ ಇನ್ ಮೆದಿಯೊ ಓರಿಯೆಂತ್ 9) ಮತ್ತು ಔದಾರ್ಯತೆಯ ಫಲವಾಗಿದೆ ತಂದೆ–ತಾಯಿ ಸಾಮಾಜಿಕ ಮುಖಂಡರು, ಶಾಂತಿದೂತರಾಗಿ ಕಾರ್ಯನಿರ್ವಹಿಸುವವರು, ಸಂಪರ್ಕ ಮಾಧ್ಯಮದ ಜಗತ್ತಿನಲ್ಲಿ ಇರುವವರು ಮತ್ತು ಶಾಂತಿಭರಿತ ಹೃದಯಗಳನ್ನು ನಿರ್ಮಿಸುವ ಬಯಕೆಯುಳ್ಳವರು, ಯುವ ಪೀಳಿಗೆಯನ್ನು ಶಿಕ್ಷಿತರನ್ನಾಗಿಸುವ ಕರೆಯನ್ನು ಮತ್ತು ಅದನ್ನು ಸಲಹುವ ಕರೆಯನ್ನು ಪಡೆದಿದ್ದಾರೆ.

4. ಯುವಕ–ಯುವತಿಯರನ್ನು ಶಾಂತಿಯ ಪಥದಲ್ಲಿ ರೂಪಿಸುವ ಹಾಗೂ ಶಾಂತಿಯನ್ನು ನಿರ್ಮಿಸುವ ನಿಟ್ಟಿನಲ್ಲಿ ನಾವೆಲ್ಲರೂ ಜತೆಗೂಡಿ ಕಾರ್ಯ ನಿರ್ವಹಿಸುವ ತುರ್ತು ಕರೆಯನ್ನು ಪಡೆದಿದ್ದೇವೆ. ಶಾಂತಿಯು ಸತ್ಯಭರಿತವೂ ಹಾಗೂ ಶಾಶ್ವತವಾಗಿರಬೇಕಾದರೆ ಅದನ್ನು ಸತ್ಯ, ನ್ಯಾಯ–ನೀತಿ, ಪ್ರೀತಿ ಮತ್ತು ಸ್ವಾತಂತ್ರ್ಯದ ಸ್ಥಂಭಗಳ ಮೇಲೆ ನಿರ್ಮಿಸಬೇಕಾಗಿದೆ. ((cf ಪೋಪ್ ಜಾನ್ XXIII, Pacem in terris, 35) ಹಾಗೂ ಯುವಕ–ಯುವತಿಯರನ್ನು ಸತ್ಯದ ಹಾಗೂ ನ್ಯಾಯದ, ಪ್ರೀತಿ ಹಾಗೂ ಸ್ವಾತಂತ್ರ್ಯದ ಹಾದಿಯಲ್ಲಿ ನಡೆಯುವತ್ತ ಶಿಕ್ಷಿತರನ್ನಾಗಿ ಮಾಡಬೇಕಾಗಿದೆ. ಮುಂದುವರಿಸಿ ಹೇಳುವುದಾದರೆ, ಶಾಂತಿಯ ಶಿಕ್ಷಣದಲ್ಲಿ, ಸಾಂಸ್ಕೃತಿಕ ವೈವಿದ್ಯತೆಯನ್ನು ಭಯ ಹುಟ್ಟಿಸುವ ಅಥವಾ ಅಪಾಯವೆಂದು ಪರಿಗಣಿಸದೆ, ಅದನ್ನು ಸಿರಿವಂತಿಕೆ ಎಂದು ಪರಿಗಣಿಸಿ ಸ್ವೀಕರಿಸಬೇಕಾಗಿದೆ.

5. ಕುಟುಂಬವು ಶಾಂತಿಯ ಮೊದಲ ಪಾಠಶಾಲೆಯಾಗಿದೆ ಹಾಗೂ ತಂದೆ–ತಾಯಿಯರು ಶಾಂತಿಯ ಪ್ರಾಥಮಿಕ ಪ್ರಾಧ್ಯಾಪಕರಾಗಿರುತ್ತಾರೆ. ಅವರ ಮಾದರಿಯ ಜೀವನ ಹಾಗೂ ಉಪದೇಶದ ಮೂಲಕ ತಮ್ಮ ಮಕ್ಕಳನ್ನು, ಪರಸ್ಪರ ಭರವಸೆ, ಗೌರವ, ಅರ್ಥೈಸುವಿಕೆ, ಆಲಿಸುವಿಕೆ, ಹಂಚುವಿಕೆ, ಆರೈಕೆ ಮತ್ತು ಕ್ಷಮಿಸುವ ಮೂಲಕ ಮೌಲ್ಯಭರಿತ ಹಾಗೂ ಶಾಂತಿಭರಿತ ಜೀವನವನ್ನು ರೂಪಿಸುವ ವಿಶೇಷ ಅವಕಾಶ ಅವರಿಗಿದೆ. ಯುವಜನರು ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಓದುವಾಗ ಇತರ ಧರ್ಮದವರೊಡನೆ ಮತ್ತು ಸಂಸ್ಕೃತಿಯ ಜನರೊಡನೆ ಬೆರೆತು ಕೆಲಸ ಮಾಡುವಾಗ ಅವರು ಪರಸ್ಪರ ಸಂಬಂಧಗಳಲ್ಲಿ ವೃದ್ಧಿಸುತ್ತಾರೆ ಅವರ ಪ್ರಾಧ್ಯಾಪಕರಿಗೆ ಮತ್ತು ಜವಾಬ್ದಾರಿಯ ಸ್ಥಾನದಲ್ಲಿರುವವರಿಗೆ ಈ ಯುವಜನತೆಯನ್ನು ಜವಾಬ್ದಾರಿಭರಿತರನ್ನಾಗಿಸುವ ಶಿಕ್ಷಣ, ಅಂದರೆ ಇತರರನ್ನು ಗೌರವಿಸುವ ಮತ್ತು ಮಾನವ ಘನತೆಯನ್ನು ಎತ್ತಿ ಹಿಡಿಯುವ ಹಾಗೂ ಮಿತ್ರತ್ವ, ನ್ಯಾಯನೀತಿ, ಶಾಂತಿ ಮತ್ತು ಸಹಕಾರದ ಪ್ರವರ್ತಕರನ್ನಾಗಿಸಿ, ಮಾನವನ ಸಂಪೂರ್ಣ ಬೆಳವಣಿಗೆಯತ್ತ ಕೊಂಡೊಯುವ ಜವಾಬ್ದಾರಿಯಿದೆ. ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳು ಶಿಕ್ಷಣದ ತಳಹದಿಯಾಗಿವೆ. ಈ ಮೂಲಕ ವಿದ್ಯಾರ್ಥಿಗಳಲ್ಲಿ ನೀತಿ–ತತ್ವಗಳ ವಿರುದ್ಧ ಭಿನ್ನಬೇಧತೆಯನ್ನು ಹುಟ್ಟಿಸುವ ಚಿಂತನೆಗಳನ್ನು ಬಿತ್ತುವ ಚಿಂತಕರ ವಿರುದ್ಧ ಎಚ್ಚರಿಸಬೇಕಾಗಿದೆ.

ರಾಜ್ಯಗಳಿಗೆ ಮತ್ತು ವೈಯಕ್ತಿಕ ಮುಖಂಡರಿಗೆ ಯುವಜನರನ್ನು ಸಾಮಾಜಿಕ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಶಿಕ್ಷಣದ ಮುಖೇನ ಸಬಲೀಕರಣಗೊಳಿಸುವ ವಿಶೇಷ ಪಾತ್ರವಿದೆ. ಧಾರ್ಮಿಕ ಮುಖಂಡರು, ಅವರ ಕರೆಗನುಗುಣವಾಗಿ, ಅವರ ಅಧ್ಯಾತ್ಮಿಕ ಹಾಗೂ ನೈತಿಕ ನಾಯಕತ್ವದ ಮೂಲಕ ಯುವಪೀಳಿಗೆಯನ್ನು ಶಾಂತಿಯ ಪಥದಲ್ಲಿ ನಡೆಸುವತ್ತ ಮತ್ತು ಶಾಂತಿಯ ದೂತರನ್ನಾಗಿಸುವತ್ತ ಪ್ರೇರೇಪಿಸಬೇಕಾಗಿದೆ. ಯುವಜನರು ಇತರರು ಹೇಗಿರಬೇಕೆಂದು ಅಪೇಕ್ಷಿಸುತ್ತಾರೋ

ಅದೇ ರೀತಿ ಅವರು ಜೀವಿಸಬೇಕಾಗಿದೆ, ಅವರು ತಮ್ಮ ಸ್ವಾತಂತ್ರ್ಯವನ್ನು ಜವಾಬ್ದಾರಿಯುತವಾಗಿ ಬಳಸಬೇಕಾಗಿದೆ ಮತ್ತು ಶಾಂತಿಯ ಸಂಸ್ಕೃತಿಯನ್ನು ಪ್ರೋತ್ಸಾಹಿಸುವತ್ತ ಗಮನ ಹರಿಸಬೇಕಾಗಿದೆ.

6. ಆದುದರಿಂದ ಶಾಂತಿ ನಮಗೆ ನೀಡುವ ಸಂಪೂರ್ಣತೆಯಲ್ಲಿ ಬ್ರಾತ್ರತ್ವದ ಜಗತ್ತನ್ನು ರೂಪಿಸುತ್ತದೆ ಮತ್ತು ಜನರಲ್ಲಿ “ಹೊಸ ರೀತಿಯ ಬ್ರಾತ್ರತ್ವ” ಅಂದರೆ ಅದರಲ್ಲಿ, “ಹಂಚಿಕೆಯ ಅಂಶವುಳ್ಳ ಶ್ರೇಷ್ಠತೆಯು ಪ್ರತಿಯೋರ್ವ ವ್ಯಕ್ತಿಗಳಲ್ಲಿ ಕಂಡು ಬರುತ್ತದೆ” (cf ಬೆನೆದಿಕ್ತ್ XVI ಲೆಬಾನಾನ್‌ಗೆ ಪ್ರೇಷಿತ ಯಾತ್ರೆಯ ಸಮಯದಲ್ಲಿ, ಸರಕಾರಿ ಮುಖಂಡರ ಭೇಟಿ, ಸಂಸ್ಥೆಗಳಿಗೆ ಭೇಟಿ, ರಾಯಭಾರಿಗಳಿಗೆ ಭೇಟಿ, ಧಾರ್ಮಿಕ ನಾಯಕರ ಭೇಟಿ ಮತ್ತು ಜಾಗತಿಕ ಸಂಸ್ಕೃತಿಯ ಪ್ರತಿನಿಧಿಗಳ ಭೇಟಿಯ ಸಂದರ್ಭ–15 ಸಪ್ಟೆಂಬರ್ 2012)

7. ನಾವೆಲ್ಲರು, ಎಲ್ಲಾ ಸಂದರ್ಭದಲ್ಲೂ ಮತ್ತು ಎಲ್ಲಾ ಕಡೆಗಳಲ್ಲೂ, ನೈತಿಕತೆ ಮತ್ತು ಧಾರ್ಮಿಕತೆಯ ಮೂಲಕ ಯುವಜನತೆಯನ್ನು ಶಾಂತಿಯ ದೂತರನ್ನಾಗಿಸಲು ಪ್ರೇರೇಪಿಸೋಣ.

ನಾವು ನಿಮಗೆ ದೀಪಾವಳಿ ಹಬ್ಬದ ಶುಭಾಶಯಗಳನ್ನು ಕೋರುತ್ತೇವೆ.

Jean-Louis Card. Tauran

**ಕಾರ್ಡಿನಲ್ ಜೀನ್ ಲೂಯಿಸ್ ತೌರಾನ್**
**ಅಧ್ಯಕ್ಷರು**

P. Miguel Ángel Ayuso Guixot

ಫಾ. ಮಿಗೆಲ್ ಆ್ಯಂಗಲ್ ಆಯುಸೊ ಗಿಕ್ಸೊ ಎಂ ಸಿ ಸಿ ಜೆ

ಕಾರ್ಯದರ್ಶಿ

**PONTIFICAL COUNCIL FOR INTERRELIGIOUS DIALOGUE**
00120 Vatican City

Tel: +39.06.6988 4321 / 06.6988 3648
Fax: +39.06.6988 4494

http://www.vatican.va/roman_curia/pontifical_councils/interelg/index.htm

E-mail: dialogo@interrel.va